# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದ ಬಾವಿಗಳ ಘಟಕ ವೆಚ್ಚ, ಸಹಾಯಧನ ಹಾಗೂ ಸಾಲದ ಮಿತಿಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:-1) ಸರ್ಕಾರದ ಆದೇಶ ಸಂಖ್ಯೆ:ಸಕಇ 152 ಎಸ್‌ಡಿಸಿ 2002, ದಿನಾಂಕ 06.06.2006

2) ಸರ್ಕಾರದ ಆದೇಶ ಸಂಖ್ಯೆ:ಸಕಇ 48 ಎಸ್‌ಡಿಸಿ 2008, ದಿನಾಂಕ 16.07.2009

3) ಪತ್ರ ಸಂಖ್ಯೆ:ಡಾ.ಬಿ.ಆರ್.ಅಂಅನಿ/ಗಂಕಯೋ/2008, ದಿನಾಂಕ 24.06.2008, 17.07.2008 ಮತ್ತು 25.11.2009

4) ದಿನಾಂಕ 10.08.2010ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭಾ ನಡವಳಿಗಳು.

ಸಂಖ್ಯೆ 14/12/10 ಬೆಂಗಳೂರು- 52.

***

ಪ್ರಸ್ತಾವನೆ:-

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿಗಳ ಘಟಕ ವೆಚ್ಚವನ್ನು ರೂ.75,000/-ದಿಂದ ರೂ.1.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರಲ್ಲಿ ಸಹಾಯಧನ ರೂ.86,000/- ಮತ್ತು ಉಳಿದ ರೂ.14,000/- ಸಾಲದ ರೂಪದಲ್ಲಿ ನಿಗಧಿಪಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು "ಟರ್ನ್ ಕೀ ಆಧಾರದ ಮೇಲೆ" ಅನುಷ್ಠಾನಗೊಳಿಸುವ ಸಲುವಾಗಿ ಕೊಳವೆ ಬಾವಿಗಳನ್ನು ಕೊರೆಯುವ, ಪಂಪ್‌ಸೆಟ್‌ಗಳನ್ನು ಸರಬರಾಜು/ಅಳವಡಿಸುವ ಹಾಗೂ ಅಂತಹ ಕೊಳವೆಬಾವಿಗಳಿಗೆ ಬೇಕಾಗುವ ವಿದ್ಯುತ್ ಸರಬರಾಜು ಸೇರಿದಂತೆ ಒಂದೇ ಪ್ಯಾಕೇಜಿನಲ್ಲಿ ಟೆಂಡರ್ ಕರೆಯಲು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಕಇ 152 ಎಸ್‌ಡಿಸಿ 2002, ದಿನಾಂಕ 06.06.2006ರಲ್ಲಿ ನಿಗಧಿಪಡಿಸಲಾದ ರೂ.1.00 ಲಕ್ಷ ಘಟಕ ದರವನ್ನು ತೆಗೆದು ಹಾಕಿ ಮುಕ್ತ ಹರಾಜಿನಲ್ಲಿ ಬಿಡ್ಸ್ ಮುಖಾಂತರ ಸ್ವೀಕರಿಸುವ ದರಗಳನ್ನು ಪರಿಗಣಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ (3)ರಲ್ಲಿ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರುರವರು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಘಟಕ ವೆಚ್ಚವನ್ನು ಅಂತರ್ಜಲ ಕುಸಿತದಿಂದಾಗಿ ಹಾಗೂ ಇಂಧನ ಮತ್ತು ಉಕ್ಕಿನ ಬೆಲೆಗಳು ಏರಿಕೆ ಆದ ಕಾರಣ ಕೊಳವೆಬಾವಿ ಕೊರೆಯುವ ಮತ್ತು ಪಂಪ್ ಮೋಟಾರುಗಳ ವೆಚ್ಚ ಅಧಿಕಗೊಂಡಿದ್ದರಿಂದ ಸರ್ಕಾರವು ನಿಗದಿಪಡಿಸಿರುವ ಘಟಕ ವೆಚ್ಚ ರೂ.1.00 ಲಕ್ಷದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲದ ಕಾರಣ ಘಟಕ ವೆಚ್ಚವನ್ನು ಹೆಚ್ಚಿಸಿ ಆದೇಶ ಹೊರಡಿಸುವಂತೆ ಪ್ರಸ್ತಾವನೆ ಕಳುಹಿಸಿಕೊಟ್ಟಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ 10.08.2010ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆ ನಡವಳಿಯನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಈ ವಿಷಯವನ್ನು ಮಂಡಿಸಲಾಗಿದ್ದು, ಸಮಿತಿಯ ನಿರ್ಣಯ ಈ ಕೆಳಕಂಡಂತೆ ಇರುತ್ತದೆ.

14/12/10

15.12.10

....2

"ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಹಾಗೂ ತೆರೆದ ಬಾವಿಗಳಿಗೆ ಇರುವ ಸಹಾಯಧನವನ್ನು ರೂ.86,000/- ದಿಂದ ರೂ.1.00 ಲಕ್ಷದವರೆಗೆ ಹೆಚ್ಚಿಸುವ ಕುರಿತಂತೆ ವಿವರವಾಗಿ ಚರ್ಚಿಸಲಾಯಿತು. ಪ್ರಸ್ತುತ ಅಂತರ್ಜಲ ಮಟ್ಟ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕುಸಿದಿರುವುದರಿಂದ ಹೆಚ್ಚಿನ ಆಳದವರೆಗೆ ಕೊಳವೆಬಾವಿಗಳನ್ನು ಕೊರೆಯಬೇಕಾಗಿರುತ್ತದೆ. ಇದಕ್ಕೆ ಪೂರಕವಾದ ಹೆಚ್ಚಿನ ಅಶ್ವಶಕ್ತಿಯ ಪಂಪ್‌ಸೆಟ್ ಹಾಗೂ ಇತರೆ ಸಾಮಗ್ರಿಗಳನ್ನು ಬಳಸಬೇಕಾಗಿದ್ದು, ಉಕ್ಕು, ತಾಮ್ರ ಮತ್ತು ಡೀಸೆಲ್ ಬೆಲೆ ಹೆಚ್ಚಾಗಿರುವ ಕಾರಣ ಘಟಕ ವೆಚ್ಚದಲ್ಲಿ ಹೆಚ್ಚುವರಿ ಉಂಟಾಗಿದೆ. ಇದರಿಂದಾಗಿ ಸಂಬಂಧಪಟ್ಟ ಫಲಾನುಭವಿ ಹೆಚ್ಚಿನ ಮೊತ್ತವನ್ನು ಸಾಲದ ರೂಪದಲ್ಲಿ ಪಡೆಯಬೇಕಾಗಿದ್ದು, ಫಲಾನುಭವಿಗೆ ಹೊರೆಯಾಗುತ್ತಿದೆ. ಆ ಹಿನ್ನಲೆಯಲ್ಲಿ ಸಹಾಯಧನದ ಮೊತ್ತವನ್ನು ರೂ.86,000/-ದಿಂದ ರೂ.1.00 ಲಕ್ಷದವರೆಗೆ ಹೆಚ್ಚಿಸಲು ಸಮಿತಿಯು ನಿರ್ಣಯಿಸುತ್ತಾ ಹೆಚ್ಚುವರಿ ಮೊತ್ತವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆಯಡಿ /ಪರಿಶಿಷ್ಟ ಪಂಗಡ ಉಪಯೋಜನೆಯಡಿ ಕ್ರೋಢೀಕೃತ ಅನುದಾನದಿಂದ ಭರಿಸಲು ತೀರ್ಮಾನಿಸಲಾಯಿತು."

ಮೇಲ್ಕಂಡ ತೀರ್ಮಾನದ ಹಿನ್ನಲೆ ಹಾಗೂ ದಿನಾಂಕ 04.10.2010ರ ಸಚಿವ ಸಂಪುಟದ ನಿರ್ಣಯದಂತೆ ಸದರಿ ಪ್ರಸ್ತಾವನೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 48 ಎಸ್‌ಡಿಸಿ 2008, ದಿನಾಂಕ 12.11.2010**

ZONAL MANAGER

ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವುಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದ ಬಾವಿಗಳ ಘಟಕ ವೆಚ್ಚ ಕುರಿತಂತೆ ವೈಯಕ್ತಿಕ ನೀರಾವರಿ ಕೊಳವೆಬಾವಿ ಕೊರೆದು ಸಬ್‌ಮರ್‌ಸಿಬಲ್ ಪಂಪ್‌ಸೆಟ್ ಕೂಡಿಸಿ ವಿದ್ಯುದ್ದೀಕರಣಗೊಳಿಸಿ ಪೂರ್ಣಗೊಳಿಸಲು ಮತ್ತು ತೆರೆದ ಬಾವಿ ಪೂರ್ಣಗೊಳಿಸಲು ಸಹಾಯಧನವನ್ನು ಈಗಿರುವ ಮಿತಿ ರೂ.86,000/-ಗಳಿಂದ ರೂ.1.00 ಲಕ್ಷಕ್ಕೆ ಹೆಚ್ಚಿಸಲು ಮತ್ತು ಸಾಲವನ್ನು ರೂ.50,000/-ವರೆಗೆ ಅಥವಾ ಸಹಾಯಧನಕ್ಕಿಂತ ಹೆಚ್ಚಿಗೆ ತಗಲುವ ವೆಚ್ಚ ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಸಂಬಂಧಪಟ್ಟ ನಿಗಮಗಳಿಂದ ನೀಡಲು ಆದೇಶಿಸಿದೆ.

ಈ ಯೋಜನೆಗೆ ಬೇಕಾಗುವ ವೆಚ್ಚವನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸತಕ್ಕದ್ದು ಹಾಗೂ ಹೆಚ್ಚಿಸುವ ಸಹಾಯಧನ ಈ ಆದೇಶ ಹೊರಡಿಸುವ ದಿನಾಂಕದ ನಂತರ ಕೊರೆಯುವ ಕೊಳವೆ/ತೆರೆದ ಬಾವಿಗಳಿಗೆ ಮಾತ್ರ ಅನ್ವಯಿಸುತ್ತದೆ.

ಈ ಯೋಜನೆಯ ಒಟ್ಟು ಘಟಕ ವೆಚ್ಚವನ್ನು(ಸಹಾಯಧನ ಮತ್ತು ಸಾಲ ಸೇರಿಸಿ) ರೂ.1.50 (ರೂಪಾಯಿ ಒಂದು ಲಕ್ಷದ ಐವತ್ತು ಸಾವಿರಗಳು ಮಾತ್ರ)ಲಕ್ಷದವರೆಗೆ ಹೆಚ್ಚಿಸತಕ್ಕದ್ದು.

ಮೇಲೆ ಆದೇಶಿಸಿದ ಅಂಶಗಳನ್ನು ಹೊರಡುಪಡಿಸಿ ಗಂಗಾ ಕಲ್ಯಾಣ ಯೋಜನೆಯ ಇತರ ಷರತ್ತುಗಳು ಈ ಮೊದಲಿನಂತೆಯೇ ಅನ್ವಯಿಸುತ್ತದೆ.

....3

ಈ ಆದೇಶವನ್ನು ದಿನಾಂಕ 10.08.2010ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿಯ ಸಭಾ ನಡವಳಿಗಳನ್ವಯ ಹಾಗೂ ದಿನಾಂಕ 04.10.2010ರಂದು ನಡೆದ ಸಚಿವ ಸಂಪುಟದ ತೀರ್ಮಾನದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:
1.ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ ಸರ್ಕಾರ, ಬೆಂಗಳೂರು
2.ಎಲ್ಲಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
3.ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
4.ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5.ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು
6.ನಿರ್ದೇಶಕರು, ಅಲ್ಪ ಸಂಖ್ಯಾತರ ಇಲಾಖೆ, ಬೆಂಗಳೂರು
7.ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
8.ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು
9.ವ್ಯವಸ್ಥಾಪಕ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು
10.ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು
11.ವ್ಯವಸ್ಥಾಪಕ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
12. ಎಲ್ಲಾ ಜಿಲ್ಲಾಧಿಕಾರಿಗಳು.
13.ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
14.ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
15.ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
16.ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು.
17.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು/ಸಚಿವ ಸಂಪುಟ ಶಾಖೆ, ವಿಕಾಸ ಸೌಧ, ಬೆಂಗಳೂರು
18.ಆರ್ಥಿಕ ಇಲಾಖೆ(ವೆಚ್ಚ-3)/ಯೋಜನಾ ಇಲಾಖೆ(ಟಿಪಿ-2)
19.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
20.ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
21.ಸರ್ಕಾರದ ಅಧೀನ ಕಾರ್ಯದರ್ಶಿಗಳು 1,2 ಮತ್ತು 3, ಸಮಾಜ ಕಲ್ಯಾಣ ಇಲಾಖೆ
22.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

- - -